ಕರ್ನಾಟಕ ವಿಧಾನ ಸಭೆ

ಬುಧವಾರ 16 ನೇ ಜೂನ್ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-19 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ) ರವರು

ಪೀಠವನ್ನು ಅಲಂಕರಿಸಿದ್ದರು

1) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ)ವಿಷಯ : ಗೋವಾದಲ್ಲಿ ಸಾವಿರಾರು ಜನ ಕನ್ನಡಿಗರನ್ನು ಹೊರಗೆ ಹಾಕಿದ್ದು ಅವರೆಲ್ಲಾ ಬೀದಿಪಾಲಾಗಿರುವ ಬಗ್ಗೆ

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೆ, ಒಂದು ಬಹಳ ಪ್ರಾಮುಖ್ಯವಾದಂತಹ ವಿಷಯವನ್ನು ನಾನು ತಮಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಗೋವಾದಲ್ಲಿ ಸಾವಿರಾರು ಜನ ಕನ್ನಡಿಗರನ್ನೆಲ್ಲಾ ಹೊರಗೆ ಬಿಟ್ಟಿದ್ದಾರೆ. ಸಾವಿರಾರು ಜನ ಬೀದಿ ಪಾಲಾಗಿದ್ದಾರೆ. ಬಹುಶ: ಅವರನ್ನು ಕೇಳುವವರು ಗತಿ ಇಲ್ಲ. ಇದು ಅಲ್ಲಿ ಇರತಕ್ಕ ಪರಿಸ್ಥಿತಿ. ಪ್ರಪ್ರಥಮವಾಗಿ ಕರ್ನಾಟಕ ಸರ್ಕಾರ ಅಲ್ಲಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ವಿಷಯ ಏನು ಎಂದು ತಿಳಿದುಕೊಳ್ಳಬೇಕು. ಇತಿಹಾಸದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಲಕ್ಷಾಂತರ ಜನ ಕನ್ನಡಿಗರು ಗೋವಾದಲ್ಲಿದ್ದಾರೆ. ಕನ್ನಡಿಗರೆಲ್ಲಾ ಬೀದಿ ಪಾಲಾಗಿದ್ದಾರೆ. ಇದರಿಂದ ನಿಜಕ್ಕೂ ನನಗೆ ಬಹಳ ನೋವಾಗಿದೆ. ಸರ್ಕಾರ ಈ ಬಗ್ಗೆ ಕಳಕಳಿಯಾದ ಒಂದು ಉತ್ತರವನ್ನು ಕೊಡಬೇಕು. ಅಲ್ಲಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಈ ಸದನದಲ್ಲಿ ಧರಣಿ ಮಾಡುತ್ತಿದ್ದೇನೆ. ದಯಮಾಡಿ ತಾವು ನಾನು ಧರಣಿ ಮಾಡುವುದಕ್ಕೆ ಅವಕಾಶ ಕೊಡಬೇಕು. ತಮ್ಮ ಮುಂದೆ ವಿಚಾರವನ್ನು ತಿಳಿಸುತ್ತಿದ್ದೇನೆ. ಇದು ಅತ್ಯಂತ ಅನ್ಯಾಯ. ನಿಜಕ್ಕೂ ಇದು ಬಹಳ ನೋವಿನ ಪ್ರಸಂಗ. ಇದು ಎಷ್ಟು ಆಗಿದೆ ಎಂದರೆ ಅಲ್ಲಿ ಯಾರೂ ಕೇಳುವವರು ಗತಿ ಇಲ್ಲ. ಹೊರ ರಾಜ್ಯಗಲ್ಲಿರುವಂತಹ ಕನ್ನಡಿಗರನ್ನು ಕೇಳುವವರು ಇಲ್ಲ. ಕರ್ನಾಟಕದಲ್ಲಿ ಎರಡು ಕೋಟಿ ಜನರು ಹೊರಗಡೆಯಿಂದ ಬಂದಿದ್ದಾರೆ. ಅವರಿಗೆ ನಾವು ಸ್ವಾಗತ ಮಾಡುತ್ತೇವೆ. ಆದರೆ ಹೊರಗಡೆ ನಮ್ಮ ಕನ್ನಡಿಗರಿಗೆ ರಕ್ಷಣೆ ಇಲ್ಲ. ಗೋವಾ ಮತ್ತು ಬೇರೆ ರಾಜ್ಯಗಳಲ್ಲಿ ಕನ್ನಡಿಗರಿಗೆ ರಕ್ಷಣೆ ಇಲ್ಲ. ಗೋವಾದಲ್ಲಿ ಕನ್ನಡಿಗರು ಬೀದಿಪಾಲಾಗಿದ್ದಾರೆ. ಮನೆಯನ್ನು ಒಡೆದುಹಾಕಿದ್ದಾರೆ. ಕೆಲಸದಿಂದ ಹೊರಕ್ಕೆ ಹಾಕಿದ್ದಾರೆ. ಬಯೋತ್ಪಾದನೆ ನಿರ್ಮಾಣವಾಗಿಹೋಗಿದೆ. ನಾನು ತಮ್ಮಲ್ಲಿ ಕಳಕಳಿಯಿಂದ ಕೈ ಮುಗಿದು ಮನವಿ ಮಾಡುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ ಇದೇ ರೀತಿ ಎಲ್ಲಾ ರಾಜ್ಯಗಳಲ್ಲೂ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆಯಾಗುತ್ತದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ದಯಮಾಡಿ ಈ ಪತ್ರಿಕೆಯನ್ನು ನೋಡಿ. ಎಷ್ಟು ದೊಡ್ಡ ದುರಂತ ನಡೆದಿದೆ ಎಂಬುದನ್ನು ತಾವು ನೋಡಬೇಕು. ಬಹಳ ಅತ್ಯಂತ ಅಪಾಯಕಾರಿಯಾಗಿದೆ. ಯಾರೊ ಸೈರಿಸಲು ಸಾಧ್ಯವಿಲ್ಲ. ಕನ್ನಡಿಗರಿಗೆ ರಕ್ಷಣೆ ಇಲ್ಲ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ಮಾಡಲು ಮುಂದಾದರು)

ಅಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರು ಹಿರಿಯ ಸದಸ್ಯರು. ದಯಮಾಡಿ ತಾವು ತಮ್ಮ ಆಸನದಲ್ಲಿ ಕುಳಿತುಕೊಳ್ಳಬೇಕು. ಮಾನ್ಯ ಸಂಸದೀಯ ಸಚಿವರಿದ್ದಾರೆ ಉತ್ತರವನ್ನು ಕೊಡುತ್ತಾರೆ. ತಾವು ದಯಮಾಡಿ ಸಹಕರಿಸಬೇಕು. ತಾವು ಆಸನದಲ್ಲಿ ಆಸೀನರಾಗಬೇಕು. ಅವರು ಸರ್ಕಾರದ ಪರವಾಗಿ ಉತ್ತರವನ್ನು ಹೇಳುತ್ತಾರೆ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ : ಮಾನ್ಯ ವಾಟಾಳ್‌ನಾಗರಾಜ್‌ರವರಲ್ಲಿ ಒಂದು ಮನವಿ. ತಾವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಸರ್ಕಾರಕ್ಕೆ ಒಂದು ಅವಕಾಶವನ್ನು ಕೊಡಬೇಕು. ಅವರು ಸಮರ್ಪಕವಾಗಿ ಉತ್ತರವನ್ನು ಕೊಡದಿದ್ದರೆ ತಾನೇ ಏನಾದರೂ ಕ್ರಮ ತೆಗೆದುಕೊಳ್ಳಬೇಕಾಗಿರುವುದು? ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಬನ್ನಿ.

†ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರು, ಮಾನ್ಯ ವಾಟಾಳ್‌ನಾಗರಾಜ್‌ರವರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಭಾರತ ದೇಶದಲ್ಲಿ ಯಾವುದೇ ಒಂದು ರಾಜ್ಯದಲ್ಲಿ ಪ್ರತಿಯೊಬ್ಬ ಸದಸ್ಯನೂ ಪ್ರತಿಯೊಬ್ಬ ನಾಗರೀಕನೂ ಕೂಡ ತನ್ನ ನ್ಯಾಯಬದ್ಧವಾದ ಬದುಕನ್ನು ನೆರವೇರಿಸಿಕೊಂಡು ಹೋಗಲು ಕರ್ತವ್ಯವನ್ನು ನಿರ್ವಹಿಸಲು ಆತ ಜವಾಬ್ದಾರನಾಗಿದ್ದಾನೆ. ಇದು ಸಂವಿಧಾನದತ್ತವಾಗಿರುವ ಒಂದು ಅಧಿಕಾರ. ಯಾವುದೇ ರಾಜ್ಯ ಈ ರೀತಿ ನಿರ್ಣಯಗಳನ್ನು ಏಕಪಕ್ಷೀಯವಾಗಿ ಮಾಡತಕ್ಕದ್ದು, ಅದು ಫ್ಯಾಸಿಸ್ಟ್ ಸಂಪ್ರದಾಯವಾಗುತ್ತದೆಯೇ ವಿನಹ ಅದರಲ್ಲಿ ನಿಜವಾಗಿಯೂ ನಾಗರೀಕರಿಗೆ ರಕ್ಷಣೆ ಸಿಗುವುದಿಲ್ಲ. ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅಶಾಂತಿ, ಅಸಮಾನತೆ, ಅಲ್ಲಿ ಪ್ರಾಯಶ: ನಮಗೆ ಕೆಲಸ ದೊರಕದೆ ಇವರಿಂದ ತೊಂದರೆಯಾಗಿದೆ ಎಂಬ ಪ್ರವೃತ್ತಿಗಳು ಬೆಳೆಯುತ್ತಿದೆ, ಹೊರ ದೇಶದಲ್ಲಿಯೂ ಕೂಡ ಈ ರೀತಿ ಭಾರತೀಯ ಸಂಜಾತರು ಬಹಳ ಪ್ರಮುಖವಾದ ಹುದ್ದೆಗಳಲ್ಲಿ ಇರುವುದರಿಂದ ಮತ್ತು ಅಲ್ಲಿ ಉದ್ಯೋಗವನ್ನು ಮಾಡುತ್ತಿರುವುದರಿಂದ ಅವರನ್ನು ಕರಿಯರೆಂದು, ಕಪ್ಪು ಬಣ್ಣದವರು ಅಥವಾ ಕಂದು ಬಣ್ಣದವರೆಂದು ಯೋಚನೆ ಮಾಡಿಯೋ ಭೇದಭಾವವನ್ನು ಸೃಷ್ಟಿಮಾಡುವುದರ ಜೊತೆಗೆ ಅವರ ಮೇಲೂ ಹಲ್ಲೆ ದೌರ್ಜನ್ಯವಾಗುತ್ತಿರುವುದನ್ನು ನಾವು ಕಂಡಿದ್ದೇವೆ. ಇಡೀ ಭಾರತೀಯ ಸಂಜಾತರಾಗಿ ಕೆಲಸ ಮಾಡತಕ್ಕಂಥ ಜನಗಳ ಬಗ್ಗೆ ಭಾರತ ದೇಶದ ಜನರು ಒಕ್ಕೊರಲಿನಿಂದ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಹಾಗೆಯೇ ಪ್ರತಿಯೊಂದು ರಾಜ್ಯದಲ್ಲೂ ಪ್ರತಿಯೊಬ್ಬ ನಾಗರೀಕರಿಗೂ ಅಧಿಕಾರ ಇರುವುದರಿಂದ ಆ ಸಂವಿಧಾನದತ್ತ ಅಧಿಕಾರವನ್ನು ಯಾರೂ ಕಿತ್ತೊಗೆಯುವುದಕ್ಕಾಗಲೀ ಅಥವಾ ಆತನಿಗೆ ರಕ್ಷಣೆ ಕೊಡಲಾರದೇ ಇರತಕ್ಕ ಸರ್ಕಾರದ ಅಕಸ್ಮಾತ್ ಕ್ರಮಗಳು ಇದ್ದರೆ ಎಂದು ತಾವು ಪತ್ರಿಕಾ ಪ್ರಕಟಣೆಯನ್ನು ತಾವು ಸಭೆಯ ಗಮನಕ್ಕೆ ತಂದಿದ್ದೀರಿ. ದಯವಿಟ್ಟು ನಮ್ಮ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಗೋವಾದ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತಾರೆ. ಅದರ ಜೊತೆಗೆ ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಹಿಡಿಯುವುದಕ್ಕೆ ನಮ್ಮವರಿಂದಲೂ ಒಂದು ತನಿಖೆಯನ್ನು ನಡೆಸಿ ವರದಿಯನ್ನು ತರಿಸಿಕೊಳ್ಳುತ್ತೇವೆ. ಅಲ್ಲಿ ರಕ್ಷಣೆ ಆಗದೇ ಇರತಕ್ಕಂಥ ಸಂದರ್ಭ ವರದಿಯೇ ಸತ್ಯಾಂಶವಾಗಿದ್ದರೆ, ಸತ್ಯಾಂಶವಾಗಿಲ್ಲದಿರುವುದಕ್ಕೂ ಸಾಕು, ಆ ಕಾರಣಕ್ಕಾಗಿ ಖಂಡಿತವಾಗಿ ಕ್ರಮ ತೆಗೆದುಕೊಳ್ಳತ್ತೇವೆ. ಇಂಥ ವಿಚಾರವನ್ನು ರಾಷ್ಟ್ರೀಯ ಭಾವೈಕ್ಯ ವೇದಿಕೆಯ ಮೇಲೆ ತರುವುದರ ಜೊತೆಗೂ ಕೂಡ ನಾವು ಒಂದು ಸುಮಧುರವಾದಂಥ ಸಂಬಂಧ ಗೋವಾದ ಜೊತೆಗೆ ಇಟ್ಟುಕೊಂಡಿದ್ದೇವೆ. ಗೋವಾ ಸಂಪೂರ್ಣವಾಗಿ ತನ್ನ ದೈನಂದಿನ ಬದುಕಿನ ಮೇಲೆ ಕನ್ನಡ ನಾಡಿನ ಮೇಲೆ ಅವಲಂಬಿತವಾಗಿರತಕ್ಕದ್ದು. ಅದರ ದೈನಂದಿನ ತರಕಾರಿ ವಿಚಾರವಾಗಿರಬಹುದು, ಅಕ್ಕಿಯ ವಿಚಾರವಾಗಿರಬಹುದು, ಹಾಲಿನ ವಿಚಾರವಾಗಿರಬಹುದು, ವಿದ್ಯುತ್‌ನ ವಿಚಾರವಾಗಿರಬಹುದು, ಪ್ರತಿಯೊಂದು ವಿಚಾರದಲ್ಲೂ ಸಹ, ಗೋವಾದ ಜನಜೀವನದ ಮಟ್ಟ ನಮ್ಮ ಕನ್ನಡನಾಡಿನ ಜನರ ಕೂಲಿಕಾರರ ಮಟ್ಟಕ್ಕಿಂತ ಹೆಚ್ಚು ಇರುವುದರಿಂದ ನಮ್ಮ ಜನ ನಿರ್ವಹಿಸುವಂಥ ಕೆಲಸ, ಅದು ಕುಶಲ ಕೆಲಸವಾಗಿರಬಹುದು, ಅಥವಾ

ದೈಹಿಕ ಶ್ರಮದ ಕೆಲಸವಾಗಿರಬಹುದು ಅವುಗಳನ್ನು ಮಾಡತಕ್ಕ ರೀತಿಯಲ್ಲಿ ಗೋವಾದ ಜನರು ಬರುವುದಿಲ್ಲ. ಅದಕ್ಕೆ ತನ್ನದೇ ಆದಂಥ ಐತಿಹಾಸಿಕ ಕಾರಣಗಳು ಇವೆ. ಆ ಕಾರಣದಿಂದ ನಾವು ನಿಜವಾಗಿಯೂ ಗೋವಾ ರಾಜ್ಯದ ಅಥವಾ ಆ ಪ್ರಾಂತ್ಯದ ಉತ್ಪಾದನೆಗೆ, ಬೆಳವಣಿಗೆಗೆ, ಅಭಿವೃದ್ಧಿಗೆ ಸಂಪೂರ್ಣವಾದ ಕೊಡುಗೆಯನ್ನು ಕನ್ನಡ ನಾಡಿನ ಜನರು ಕೊಟ್ಟಿದ್ದಾರೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಎತ್ತಿರುವಂಥ ಪ್ರಶ್ನೆ ನಿಜವಾಗಿಯೂ ನಾವೆಲ್ಲರೂ ಗಂಭೀರವಾಗಿ ಪರಿಗಣಿಸಬೇಕಾಗಿರತಕ್ಕದ್ದು ಇದೆ. ಅವರ ಜೊತೆ ಪತ್ರವ್ಯವಹಾರವನ್ನು ಮಾಡುತ್ತೇವೆ, ರಕ್ಷಣೆಯನ್ನು ಕೊಡುತ್ತೇವೆ. ಅದರ ಜೊತೆಗೆ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ, ಪ್ರಧಾನ ಮಂತ್ರಿಗಳ ಗಮನಕ್ಕೂ ಈ ವಿಚಾರವನ್ನು ತಂದು, ತಕ್ಷಣವೇ, ಈ ನಿಮಿಷವೇ, ಈ ದಿವಸವೇ ಅದನ್ನು ಬರೆಯತಕ್ಕ ಕೆಲಸವನ್ನು ಮಾಡುತ್ತೇವೆ. ತಾವು ಹಿರಿಯ ಸದ್ಯರಾಗಿರುವುದರಿಂದ ಮತ್ತೊಂದು ರಾಜ್ಯದಲ್ಲಾಗಿರತಕ್ಕಂಥ ಒಂದು ಘಟನೆಯ ಬಗ್ಗೆ ಈ ರಾಜ್ಯದ ಇತಿಮಿತಿಗಳು ಏನಿವೆ ಎಂಬುದು ತಮಗೆ ಗೊತ್ತಿದೆ. ಇದನ್ನು ಅವರ ಮೂಲಕ ಜಾರಿಗೊಳಿಸುವ ಕೆಲಸವನ್ನು ನಾವು ಮಾಡುತ್ತೇವೆ. ನಿಮ್ಮ ಕನ್ನಡದ ಪ್ರೇಮ, ಕನ್ನಡಿಗರ ಪ್ರೇಮಕ್ಕೆ ಯಾವ ರೀತಿಯಾಗಿಯೂ ಕಡಿಮೆಯಲ್ಲದಂಥ ರೀತಿಯಲ್ಲಿ ಸರ್ಕಾರದ ಈ ಭಾಗದಲ್ಲಿರುವ ನಾವು ಕೂಡ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ತಾವು ಧರಣಿಯನ್ನು ಮಾಡಬಾರದು. ತಾವು ಧರಣಿ ಮಾಡುವಂಥದ್ದರ ಉದ್ದೇಶ ಈ ಗಹನವಾದಂಥ ವಿಚಾರ ಎಲ್ಲರಿಗೂ ಸಾರ್ವಜನಿಕರಿಗೂ, ಸರ್ಕಾರಕ್ಕೆ ಕೇಂದ್ರ ಸರ್ಕಾರಕ್ಕೆ ಮನವರಿಕೆಯಾಗಬೇಕು ಎನ್ನುವಂಥದ್ದು. ಈಗ ಅದು ಮನವರಿಕೆಯಾಗಿರುವುದರಿಂದ ತಾವು ಈ ವಿಚಾರದ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಮಾಡಿರುವುದರಿಂದ ಹಿರಿಯ ಸದಸ್ಯರಾದ ತಾವು ನಿನ್ನೆ ಪ್ರಸ್ತಾಪ ಮಾಡಲ್ಪಟ್ಟಿರುವ 69ರ ವಿಧಿಯ ವಿಚಾರದಲ್ಲಿ ತಾವು ಕೆಲಸ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಏ.ಟಿ. ರಾಮಸ್ವಾಮಿಯವರು.....

ಶ್ರೀ ವಾಟಾಳ್ ನಾಗರಾಜ್ : ನನಗೆ ಬಹಳ ನೋವಾಗುತ್ತದೆ.

ಅಧ್ಯಕ್ಷರು : ಈಗ ಚರ್ಚೆಗೆ ಅವಕಾಶ ಇಲ್ಲ. ತಾವು ಸರ್ಕಾರದ ಗಮನವನ್ನು ಸೆಳೆದಿದ್ದೀರಿ ಸರ್ಕಾರ ಉತ್ತರವನ್ನು ಕೊಟ್ಟಿದೆ. ಮಾನ್ಯ ರಾಮಸ್ವಾಮಿಯವರು....

ಶ್ರೀ ವಾಟಾಳ್ ನಾಗರಾಜ್ : ನಾನು ಚರ್ಚೆ ಮಾಡಲು ಹೋಗುವುದಿಲ್ಲ. ಅಲ್ಲಿನ ಮುಖ್ಯಕಾರ್ಯದರ್ಶಿಯವರಿಗೆ ನೇರವಾಗಿ ಮಾತನಾಡಿ ಹೇಳಿ ತಮ್ಮ ಬಗ್ಗೆ ನನಗೆ ಗೌರವವಿದೆ. ಅದರ ಬಗ್ಗೆ ಬೇರೆ ಮಾತಿಲ್ಲ. ನನಗೆ ನೋವಾಗುತ್ತಿದೆ. ನಾಲ್ಕು ದಶಕಗಳಿಂದ ಈ ನಾಡಿಗೆ ಹೋರಾಟ ಮಾಡಿರತಕ್ಕ ನನಗೆ ಇದರಿಂದ ನೋವಾಗುತ್ತಿದೆ. ಅಲ್ಲಿ ಅವರನ್ನು ಬೀದಿಗೆ ಹಾಕಿದ್ದಾರೆ, ಒದ್ದಿದ್ದಾರೆ, ಹೊರಕ್ಕೆ ಹಾಕಿದ್ದಾರೆ, ಕನ್ನಡಿಗರನ್ನು ಕೇಳುವ ಪರಿಸ್ಥಿತಿಯಲ್ಲಿ ಇಲ್ಲ.

ಅಧ್ಯಕ್ಷರು : ಇದು ಶೂನ್ಯವೇಳೆ. ಸರ್ಕಾರ ಅದಕ್ಕೆ ಉತ್ತರ ನೀಡಿದೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ನೇರವಾಗಿ ಉತ್ತರ ಕೊಡದೆ ಕಾನೂನು ಸುವ್ಯವಸ್ಥೆ, ದೇಶ, ಭಾರತ ದೇಶ ಇದನ್ನೆಲ್ಲಾ ಮಾತನಾಡಿಕೊಂಡು ಕುಳಿತರೆ ಆಗುವುದಿಲ್ಲ. ಇವತ್ತು ಅಲ್ಲಿ ಕನ್ನಡಿಗರನ್ನು ಹೊರಕ್ಕೆ ಹಾಕಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಮತ್ತೆ ಹೇಗೆ ಮಾತನಾಡಬೇಕೆಂದು ಹೇಳಿ? ಹೀಗೆ ಮಾತನಾಡಿದ ತಕ್ಷಣ ಸಮಸ್ಯೆ ಬಗೆಹರಿಯತ್ತದೆಯೇ? ಭಾರತ ದೇಶದಲ್ಲಿ ಅವರಿಗೆ ಅಧಿಕಾರ ಇದೆಯೆಂಬುದನ್ನು ನಾನು ಪ್ರಸ್ತಾಪ ಮಾಡಿದೆ.

ಶ್ರೀ ವಾಟಾಳ್ ನಾಗರಾಜ್ : ಕನ್ನಡಿಗರು ಅಲ್ಲಿ ಕೂಲಿಗಾರರು. ಅವರು ರಾಜಕೀಯ ಮಾಡಲು ಹೋಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಿಮ್ಮ ಉದ್ದೇಶ ಇವತ್ತು ತಕ್ಷಣವೇ ನಮ್ಮ ಮುಖ್ಯಕಾರ್ಯದರ್ಶಿಯವರು ಆ ರಾಜ್ಯದ ಮುಖ್ಯಕಾರ್ಯದರ್ಶಿಯವರೊಂದಿಗೆ ಮಾತನಾಡುತ್ತಾರೆ. ಈ ನಿಮಿಷದಲ್ಲಿ ಗಮನ ಸೆಳೆದಿದ್ದೀರಿ. ಐದು ನಿಮಿಷದಲ್ಲಿ ಅವರ ಜೊತೆ ಮಾತನಾಡುತ್ತೇವೆ. ಸಮಂಜಸವಾದ ಉತ್ತರವನ್ನು ಕೊಡುತ್ತೇವೆ. ಇನ್ನೇನು ಆಗಬೇಕು ಹೇಳಿ? ನಾವು ಇನ್ನೇನು ಮಾಡಬೇಕು? ಭಾರತ ದೇಶ ಅದು, ಇದು ಮಾತನಾಡಬೇಡಿ ಎಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ನೇರವಾಗಿ ಹೇಳದೆ ಸುತ್ತು ಬಳಸಿ ಹೇಳುತ್ತೀರಲ್ಲಾ?

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಹಿರಿಯ ಸದಸ್ಯರು, ದಯಮಾಡಿ ಸಹಕರಿಸಿ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಸುತ್ತು ಬಳಸಿ ಮಾತನಾಡಿಲ್ಲ. ನೇರವಾಗಿಯೇ ಹೇಳಿದ್ದೇನೆ. ನಮ್ಮ ಅಂತರ್ಗತವಾದ ಹಕ್ಕಿನ ಬಗ್ಗೆ ಸ್ಪಷ್ಟಪಡಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಕನ್ನಡಿಗರು ಬೀದಿಪಾಲಾಗಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಹೌದು ಆಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಗೋವಾದ ಕನ್ನಡಿಗರ ಕತೆ ಕಣ್ಣೀರಿನ ಕತೆಯಾಗಿದೆ; ಅವರು ಬೀದಿಪಾಲಾಗಿದ್ದಾರೆ. ಮಾನ್ಯ ಉಪಮುಖ್ಯಮಂತ್ರಿಗಳೇ, ತಮ್ಮ ಗಮನಕ್ಕೂ ತರುತ್ತಿದ್ದೇನೆ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಸದನದ ಬಾವಿಗೆ ಬಂದು ಮಾತನಾಡಿದರು)

ಶ್ರೀ ಎಂ.ಪಿ. ಪ್ರಕಾಶ್ : ಸರ್ಕಾರದ ಗಮನಕ್ಕೆ ಅದು ಬಂದಿದೆ. ಈ ರೀತಿ ಒಬ್ಬೊಬ್ಬ ವ್ಯಕ್ತಿಗೆ ಕೊಡತಕ್ಕದ್ದಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ದಯಮಾಡಿ ತಮ್ಮ ಸ್ಥಾನವನ್ನು ಅಲಕಂಕರಿಸಬೇಕು. ಸಂಸದೀಯ ಸಚಿವರು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ.

†**ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಉತ್ತರವನ್ನು ಕೊಟ್ಟಿದ್ದಾರೆ. ಶ್ರೀ ವಾಟಾಳ್ ನಾಗರಾಜ್‌ರವರು ಸರ್ಕಾರದ ಗಮನ ಸೆಳೆದಿದ್ದಾರೆ. ಅವರ ಕಳಕಳಿ ನಮಗೆ ಅರ್ಥವಾಗುತ್ತದೆ. ಕನ್ನಡಿಗರಿಗೆ ಅಲ್ಲಿ ಏನೇನು ತೊಂದರೆಯಾಗಿದೆ, ಅವಮಾನವಾಗಿದೆ ಅದರ ಬಗ್ಗೆ ನಮ್ಮ ಮುಖ್ಯಕಾರ್ಯದರ್ಶಿಯವರಿಗೆ ಹೇಳಿ ಆ ರಾಜ್ಯದ ಮುಖ್ಯಕಾರ್ಯದರ್ಶಿಯವರಿಗೆ ಯಾವ ರೀತಿಯಾಗಿ ನಮ್ಮ ನಿಲುವನ್ನು ತಿಳಿಸಬೇಕು, ಕರ್ನಾಟಕದ ಬಗ್ಗೆ ತಾವೇನು ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ ಅದನ್ನೆಲ್ಲಾ ತಿಳಿಸಿ ಅವರ ಗಮನಸೆಳೆದು ಅವರಿಗೆ ರಕ್ಷಣೆಕೊಡತಕ್ಕ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆ ಎಂಬ ಮಾತನ್ನು ಅವರು ಹೇಳಿದ್ದಾರೆ. ಈ ಕೂಡಲೇ ಆ ಕೆಲಸವನ್ನು ಮಾಡಿಸುತ್ತೇವೆ. ತಕ್ಷಣವೇ ಅಲ್ಲಿಂದ ವರದಿಯನ್ನು ತರಿಸುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ತಕ್ಷಣವೇ ಆರ್ಮಿ ಪೋಲೀಸ್‌ನ್ನು ಕರ್ನಾಟಕದಿಂದ ಗೋವಾಕ್ಕೆ ಕಳುಹಿಸಲು ಆಗುವುದಿಲ್ಲ. ಕೆಲವು ಸಮಸ್ಯೆ ಇದೆ. ಅಲ್ಲಿನ ಪರಿಸ್ಥಿತಿ ಏನಿದೆ ಎಂಬ ಬಗ್ಗೆ ಸರ್ಕಾರ ತಿಳಿದುಕೊಂಡು.....

ಶ್ರೀ ವಾಟಾಳ್ ನಾಗರಾಜ್ : ಈಗ ಎಷ್ಟೋ ಆಧುನಿಕವಾದಂಥ ಉಪಕರಣಗಳು ಇವೆ. ತಕ್ಷಣವೇ ಎರಡು ನಿಮಿಷದಲ್ಲಿ ಫೋನ್ ಮಾಡಿ ವರದಿಯನ್ನು ತರಿಸಿಕೊಳ್ಳಬಹುದು.